ವಿಷಯ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಕರೆಯಿಸಿ, ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂಬ ವಿಶ್ವಾಸವನ್ನು ಅವರಿಗೆ ತಿಳಿಸುತ್ತೇನೆ.

ಶ್ರೀ ಶಿವಾನಂದ ಪಾಟೀಲ್ : ಸೂಕ್ತ ಕ್ರಮ ಎಲ್ಲರೂ ಕೈಗೊಳ್ಳುತ್ತೀರಿ, ಆದರೆ ಯಾವ ಅಧಿಕಾರಿ 36 ಕೋಟಿ ರೂಪಾಯಿ ಖರ್ಚು ಮಾಡಿ ಈ ಯೋಜನೆ ಮಾಡಿದ್ದಾನೆ, ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ? ಕೇವಲ ಚಲನಚಿತ್ರ ಸಮಾರಂಭಕ್ಕೆ ಮುಖ್ಯಮಂತ್ರಿಗಳು ಬಂದಿದ್ದರು. ಆ ಸಂದರ್ಭದಲ್ಲಿ ಈ ಯೋಜನೆಯನ್ನು ಉದ್ಘಾಟನೆ ಮಾಡಿದ್ದಾರೆ. ಉದ್ಘಾಟನೆ ಮಾಡಿದ ಒಂದು ತಿಂಗಳು, ಹದಿನೈದು ದಿವಸದೊಳಗೆ ಈ ಯೋಜನೆ ನಿರ್ಗತಿಕ ಆಗಬೇಕಾದರೆ ಅದರಲ್ಲಿ ಏನಾದರೂ ಲೋಪದೋಷ ಇರಬಹುದಲ್ಲಾ ಮತ್ತು ಅದಕ್ಕೆ ಪರ್ಯಾಯ ವ್ಯವಸ್ಥೆ ಏನು ಮಾಡುತ್ತೀರಿ? ಕಳೆದ 12-13 ದಿವಸದಿಂದ ಬಿಜಾಪುರ ಜನರಿಗೆ ಕುಡಿಯುವುದಕ್ಕೆ ನೀರಿಲ್ಲ. ಈ ವಿಚಾರದಲ್ಲಿ ನಿಮ್ಮ ಇಲಾಖೆಯ ಅಧಿಕಾರಿಗಳಿಂದ ಕೇಳಿ ಉತ್ತರ ಕೊಡಿ. ಯಾವುದೇ ಮಂತ್ರಿಗಳು ಸೂಕ್ತ ಕ್ರಮ ಕೈಗೊಳ್ಳುತ್ತಾರೆ, ಅದರಲ್ಲೇನೂ ತಪ್ಪಿಲ್ಲ. ಆದರೆ, ಪರ್ಯಾಯ ವ್ಯವಸ್ಥೆ ಬಗ್ಗೆ ಅಧಿಕಾರಿಗಳಿಂದ ಕೇಳಿ ಸರಿಯಾದ ಉತ್ತರ ಕೊಡಿ.

ಶ್ರೀ ಎಂ.ಎಸ್. ಪಾಟೀಲ್ : ನಾನು ಈಗಾಗಲೇ ಹೇಳಿದೆ. ಅವರ ಪ್ರಶ್ನೆ ಈಗತಾನೇ ನನಗೆ ಬಂದಿದೆ.

ಶ್ರೀ ಶಿವಾನಂದ ಪಾಟೀಲ್ : ಮೂರು ದಿವಸದ ಹಿಂದೆಯೇ ನಾನು ಅಧ್ಯಕ್ಷರಿಗೆ ಕೊಟ್ಟಿದ್ದೇನೆ.

ಶ್ರೀ ಎಂ.ಎಸ್. ಪಾಟೀಲ್ : ತಾವೂ ಬನ್ನಿ, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ತಮ್ಮ ಸಮಕ್ಷಮದಲ್ಲಿಯೇ ಮಾಡೋಣ ಇವತ್ತು ಸಾಯಂಕಾಲವೇ ತಾವು ಬನ್ನಿ.

ಶ್ರೀ ಶಿವಾನಂದ ಪಾಟೀಲ್ : ಇವತ್ತು ಅಲ್ಲಿ ಸಮಸ್ಯೆ ಏನಾಗಿದೆ ಎಂಬುದು ತಮಗೆ ಗೊತ್ತಿಲ್ಲ ಇವತ್ತು, ಈ ಯೋಜನೆಯಲ್ಲಿ ಅಳವಡಿಸಿರತಕ್ಕ 7 ಲಕ್ಷ ರೂಪಾಯಿಗಳ ಒಂದು ಟಿ.ಸಿ. ಸುಟ್ಟು ಹೋಗಿದೆ. ಇದು ತಮ್ಮ ಇಲಾಖೆಯ ನಿರ್ಲಕ್ಷ್ಯತನದಿಂದ ಆಗಿರುತ್ತದೆ. ಆ ಟಿ.ಸಿ. ತಂದು ಹಾಕತಕ್ಕ ಕೆಲಸ ನಿಮ್ಮ ವಾಟರ್ ಬೋರ್ಡ್‌ನವರಿಂದ ಆಗಿಲ್ಲ. ಅಂತಹ ದೊಡ್ಡ ಸಾಮರ್ಥ್ಯ ಇರತಕ್ಕ ಟಿ.ಸಿ. ಯನ್ನು ಈ ಯೋಜನೆಗೆ ಹಾಕತಕ್ಕಂತಾದ್ದು ಸೂಕ್ತವಲ್ಲ. ಇದಕ್ಕೆ ಏನಾದರೂ ಬದಲಾವಣೆ ಮಾಡಿ, ಒಂದು ಸುಟ್ಟರೂ ಇನ್ನೊಂದು ಇರತಕ್ಕಂಥ ಕ್ರಮವನ್ನು ಇವತ್ತೇ ಕೈಗೊಳ್ಳುತ್ತೀರಾ? ಇದನ್ನೂ ಕೂಡ ತಮ್ಮ ಉತ್ತರದ ಪ್ರಕಾರ ಗೊತ್ತಾಗುತ್ತಿದೆ. ಇವತ್ತಾದರೂ ಕರೆಸಿ, ಒಂದು ಮೀಟಿಂಗ್ ಮಾಡಿ, ಏಕೆ ಈ ರೀತಿಯಾಗಿದೆ, ಎಲ್ಲಿ ತಪ್ಪಾಗಿದೆ ಎಂಬುದನ್ನು ಕಂಡು ಹಿಡಿದು, ಲೋಪದೋಷಗಳ ನಿವಾರಣೆಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಿಕೊಡಿ.

ಶ್ರೀ ಎಂ.ಎಸ್. ಪಾಟೀಲ್ : ಮಾನ್ಯ ಸದಸ್ಯರನ್ನೂ ಕರೆಸಿ, ಅವರ ಸಮಕ್ಷಮದಲ್ಲಿಯೇ ಕ್ರಮ ಕೈಗೊಳ್ಳತಕ್ಕ ಕೆಲಸ ಮಾಡುತ್ತೇನೆ.

(ಋ) ಕೆ.ಇ.ಬಿ. ಯವರು ಕಡ್ಡಾಯವಾಗಿ ಬ್ಯಾಂಕ್‌ನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಬಿಲ್ ಕಟ್ಟಬೇಕೆಂದು ಆದೇಶ ನೀಡಿರುವುದು.

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಉಪಾಧ್ಯಕ್ಷರೆ, ಇದು ಮಾನ್ಯ ಇಂಧನ ಖಾತೆ ಸಚಿವರಿಗೆ ಸಂಬಂಧಪಟ್ಟಿದ್ದು ಕೆ.ಇ.ಬಿ. ನವರು 10-12-98 ರಲ್ಲಿ ಒಂದು ಆದೇಶವನ್ನು ಮಾಡಿ 500 ರೂಪಾಯಿ ಮತ್ತು ಅದಕ್ಕೆ ಹೆಚ್ಚಿನ ಬಿಲ್ಲುಗಳೇನಿವೆ, ಅವುಗಳನ್ನು ಕಡ್ಡಾಯವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಕೊಡಬೇಕೆಂದು ಆದೇಶ ಮಾಡಿದ್ದಾರೆ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಐದು ನೂರು ರೂಪಾಯಿಗಿಂತ ಹೆಚ್ಚಿನ ಬಿಲ್ಲುಗಳನ್ನು ಕಟ್ಟಲು, ಇದಕ್ಕೋಸ್ಕರವೇ ಬ್ಯಾಂಕಿನಲ್ಲಿ ಅಕೌಂಟ್ ಮಾಡಿಕೊಳ್ಳಬೇಕು ಮತ್ತು ಬ್ಯಾಂಕಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ತರುವುದು ರೈತರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ಈ ಆದೇಶವನ್ನು ರದ್ದುಪಡಿಸಿ, ಕೊನೇ ಪಕ್ಷ ಗ್ರಾಮೀಣ ಪ್ರದೇಶಗಳಿಗೆ ಇದರಿಂದ ವಿನಾಯಿತಿ ಕೊಡಬೇಕು. ಎರಡನೆಯದು, ತಾವು ಅನಧಿಕೃತ ವಿದ್ಯುತ್ ಸಂಪರ್ಕಗಳನ್ನು ಸಕ್ರಮಗೊಳಿಸುವುದಕ್ಕೆ ದಿನಾಂಕವನ್ನು ನಿಗದಿ ಮಾಡಿದ್ದೀರಿ. ಮತ್ತು ಸಾಕಷ್ಟು ರೈತರೂ ಈಗ ಹಣವನ್ನು ಕಟ್ಟಿದ್ದಾರೆ. ಆದರೆ ಇನ್ನೂ ಅನೇಕ ಅನಧಿಕೃತ ಸಂಪರ್ಕಗಳಿಗೆ ಸಕ್ರಮಗೊಳಿಸುವುದಕ್ಕೆ ರೈತರು ಹಣ ಕಟ್ಟುವುದಕ್ಕೆ ತಯಾರಿದ್ದಾರೆ. ಆದರೆ ನೀವು ನಿಗದಿ ಮಾಡಿರತಕ್ಕ ಕೊನೇ ತಾರೀಖು ಮುಗಿದು ಹೋಗಿರುತ್ತದೆ. ಇದರಿಂದ, ರೈತರು ಹಣ ಕಟ್ಟುವುದಕ್ಕಾಗಿಲ್ಲ. ಮಾರ್ಚ್ ಏಪ್ರಿಲ್ ನಲ್ಲಿ ರೈತರು ಹಣವನ್ನು ಕಟ್ಟುವುದಕ್ಕೆ ಶಕ್ತಿ ಇರುತ್ತದೆ. ಆದ್ದರಿಂದ, ದಯಮಾಡಿ ಇವತ್ತು ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವುದಕ್ಕೆ ತಾವೇನು ದಿನಾಂಕವನ್ನು ನಿಗದಿ ಮಾಡಿದ್ದೀರಿ, ಅದನ್ನು ವಿಸ್ತರಣೆ ಮಾಡತಕ್ಕಂಥದ್ದು ಮತ್ತು 500 ರೂಪಾಯಿ ಮೇಲ್ಪಟ್ಟು ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಕೊಡಬೇಕೆಂಬುದನ್ನು ಸಡಿಲಿಸಿ ಗ್ರಾಮಾಂತರ ಪ್ರದೇಶಗಳಿಗೆ ವಿನಾಯಿತಿ ಕೊಡತಕ್ಕಂತಾದ್ದಕ್ಕೆ ತಾವು ದಯಮಾಡಿ, ಸರ್ಕಾರದ ವತಿಯಿಂದ ಉತ್ತರಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಸದಸ್ಯರು ಎರಡು ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಗ್ರಾಮಾಂತರ ಪ್ರದೇಶದವರು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ, ಇದಕ್ಕೆ ವಿನಾಯಿತಿ ಕೊಡಿ ಎಂದು ಕೇಳಿದ್ದಾರೆ. ಈ ದಿವಸವೇ ಅಧಿಕಾರಿಗಳ ಜೊತೆ ಮಾತನಾಡಿ, ರೈತರಿಗೆ ವಿನಾಕಾರಣ ತೊಂದರೆಯಾಗುತ್ತಿರುವುದನ್ನು ಪರಿಹಾರ ಮಾಡುವಂತಾದ್ದು ಮತ್ತು ನಾವೇನು ಅವಧಿಯನ್ನು ನಿರ್ಧಾರಪಡಿಸಿದ್ದೆವು, ಆ ಅವಧಿಯನ್ನು ಮುಂದುವರಿಸಬೇಕೆಂದು ಹೇಳುವಾಗ, ಅದರ ಸಾಧಕ ಬಾಧಕಗಳೇನು ಎಂಬ ವಿಚಾರ ನನಗೆ ಗೊತ್ತಿಲ್ಲ. ಆದರೂ, ಇದೊಂದು ಉತ್ತಮವಾದಂಥ ಸಲಹೆ. ಅನಧಿಕೃತವಾದುದನ್ನು ಅಧಿಕೃತಗೊಳಿಸುವುದಕ್ಕೆ ಹಣ ಕಟ್ಟಲಿಕ್ಕೆ ಮೊದಲು ರೈತರ ಹತ್ತಿರ ಹಣ ಇರಲಿಲ್ಲ, ಈಗಾಗಲೇ ಸುಗ್ಗಿಯಾಗಿದೆ, ಈಗ ಅವರ ಕೈಯಲ್ಲಿ ಹಣ ಇದೆ. ಆದ್ದರಿಂದ, ಈಗ ಹಣ ಕಟ್ಟುತ್ತಾರೆ ಎಂಬ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ದಿವಸವೇ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರ ಜೊತೆ ಮತ್ತು ಮಾನ್ಯ ಸಚಿವರ ಜೊತೆ ಮಾತನಾಡಿ, ನಾಳೆ- ನಾಡಿದ್ದರಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

(ಖ) ಕಳ್ಳಂಬೆಳ್ಳ ಮತ್ತು ಬುಕ್ಕಾಪಟ್ಟಣ ಹೋಬಳಿಗಳಲ್ಲಿ ಕುರಿ ಸಾಕಾಣಿಕೆ ಅಭಿವೃದ್ಧಿ ಯೋಜನೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ನನ್ನ ಕ್ಷೇತ್ರದ ಕಳ್ಳಂಬೆಳ್ಳ ಮತ್ತು ಬುಕ್ಕಾ ಪಟ್ಟಣ ಹೋಬಳಿಯಲ್ಲಿ ಕುರಿ ಸಂಪತ್ತು ಹೆಚ್ಚು. ಸ್ವಾಭಾವಿಕವಾಗಿ ಯಾದವ ಜನಾಂಗದವರು ಇವುಗಳನ್ನು ಹೆಚ್ಚು ಸಾಕುತ್ತಾರೆ. ಈ ಕುರಿಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಸರ್ಕಾರ ಒಂದಲ್ಲ ಒಂದು